**ಅಸಲು ದಾವಾ ಸಂಖ್ಯೆ - 46/2017**

**ವಾದಿ ಸಾಕ್ಷಿ - 1**

**ದಿನಾಂಕ 21-01-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಸಲೀಂ ಪಟೇಲರು ಸಾಕ್ಷಿ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜೆ. ವಿ. ಹತ್ತಿಯವರಿಂದ.**

ನನ್ನ ತಂದೆಯಾದ 1 ನೇ ಪ್ರತಿವಾದಿ ಅಪ್ಪಾಸಾಹೇಬರಿಗೆ ನಾಡಗೌಡ ಎನ್ನುವ ಒಬ್ಬ ತಮ್ಮ ಇರುತ್ತಾನೆ ಎಂದರೆ ಸರಿ. ಸದರಿ ಅಪ್ಪಾಸಾಹೇಬರ ತಾಯಿಯ ಹೆಸರು ಗಂಗಮ್ಮ @ ಗಂಗಾದೇವಿ ಎಂದರೆ ಸರಿ. ಸದರಿ ನಾಡಗೌಡ ಮತ್ತು ಗಂಗಮ್ಮ @ ಗಂಗಾದೇವಿ ಈಗಲೂ ಜೀವಂತ ಇದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ 2 ನೇ ಪ್ರತಿವಾದಿಯಾದ ಶ್ರೀಮತಿ ಲಕ್ಷ್ಮೀಬಾಯಿ ಹಾಗೂ ಕಲಾವತಿ ಮತ್ತು ಶ್ರೀದೇವಿ ಎನ್ನುವ 3 ಜನ ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಮತ್ತು ಶ್ರೀದೇವಿಗೆ ಚನ್ನಪ್ಪಗೌಡ ಮತ್ತು ದೇವು ಎನ್ನುವ ಇಬ್ಬರು ಮಕ್ಕಳಿದ್ದಾರೆ ಎಂದರೆ ಸುಳ್ಳು. 1 ನೇ ಪ್ರತಿವಾದಿಯ ತಂದೆ ಹೆಸರು ರುದ್ರಗೌಡ. ರುದ್ರಗೌಡರಿಗೆ ಇಬ್ಬರು ಹೆಂಡತಿಯರು. ಅವರ ಹೆಸರು ಶಿವಲಿಂಗಮ್ಮ ಮತ್ತು ಗಂಗಮ್ಮ @ ಗಂಗಾದೇವಿ. ಶಿವಲಿಂಗಮ್ಮಳು ರುದ್ರಗೌಡರ ಮೊದಲ ಹೆಂಡತಿ ಎಂದರೆ ಸರಿ. ಸದರಿ ಶಿವಲಿಂಗಮ್ಮಳಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ಅವರ ಹೆಸರು ಸಿದ್ದಪ್ಪಗೌಡ, ಗೊಲ್ಲಾಳಪ್ಪಗೌಡ, ಅವಪ್ಪಗೌಡ, ದುಂಡಮ್ಮ, ಕಸ್ತೂರಿಬಾಯಿ ಮತ್ತು ಗುರುಬಾಯಿ.

ರುದ್ರಗೌಡರಿಗೆ 300 ಎಕರೆಗಿಂತ ಹೆಚ್ಚು ಜಮೀನು ಇತ್ತು. ಸದರಿ ಜಮೀನುಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತ್ತಿಲ್ಲ. ರುದ್ರಗೌಡನ ಮಕ್ಕಳ ನಡುವೆ ನಾನು ಹುಟ್ಟುವುದಕ್ಕಿಂತ ಮೊದಲೆ ವಿಭಾಗ ಆಗಿರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನ ನಾನು ನೋಡಿಲ್ಲ ಮತ್ತು ಅವುಗಳನ್ನ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸದರಿ ವಿಭಾಗದ ಪ್ರಕಾರ ನಮ್ಮ ದೊಡ್ಡಪ್ಪಂದಿರಾದ ಸಿದ್ದಪ್ಪಗೌಡ, ಗೊಲ್ಲಾಳಪ್ಪಗೌಡ ಮತ್ತು ಅವಪ್ಪಗೌಡರಿಗೆ ತಲಾ 70 ಎಕರೆಗಿಂತ ಹೆಚ್ಚು ಜಮೀನು ಹೋಗಿರುತ್ತದೆ. ಯಾವ ಯಾವ ಸರ್ವೆ ನಂಬರಗಳಲ್ಲಿ ಎಷ್ಟು ಎಷ್ಟು ವಿಸ್ತೀರ್ಣ ಹೋಗಿದೆ ಎನ್ನುವುದು ಗೊತ್ತಿಲ್ಲ. ಹೆಣ್ಣುಮಕ್ಕಳಿಗೆ ಯಾವುದೆ ಆಸ್ತಿಗಳನ್ನ ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಚಿಕ್ಕ ಅತ್ತೆಯಾದ ಕಸ್ತೂರಿಬಾಯಿಗೆ ಸ್ವಲ್ಪ ಜಮೀನುಗಳನ್ನ ನೀಡಿದ್ದಾರೆ ಎಂದು ಹೇಳುತ್ತಾರೆ.

ಶಿವಲಿಂಗಮ್ಮ ಸುಮಾರು 15 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಗಂಗಮ್ಮಳ ವಿವಾಹ ಯಾವ ಸಾಲಿನಲ್ಲಿ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಆತನ ಸಹೋದರನ ನಡುವೆ ವಿಭಾಗವಾಗಿರವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯ ಸಹೋದರರು ಆಸ್ತಿಗಳನ್ನ ನಮ್ಮ ತಂದೆಗೆ ಬಿಟ್ಟುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಗಂಗಮ್ಮಳಿಗೆ ಯಾವುದೇ ಆಸ್ತಿಗಳನ್ನ ನೀಡಿರುವುದಿಲ್ಲ.

**ಅಸಲು ದಾವಾ ಸಂಖ್ಯೆ- 46/2017**

**ವಾದಿ ಸಾಕ್ಷಿ - 1**

ದಾವಾ ಸರ್ವೆ ನಂಬರ್ 293 ರಲ್ಲಿನ 10-18 ಎಕರೆಯನ್ನ ನನ್ನ ತಂದೆಯಾದ 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಜಮೀನನ್ನ ಮಾರಾಟ ಮಾಡಿ ಸರ್ವೆ ನಂಬರ್ 129/5 ರಲ್ಲಿ 03-31 ಎಕರೆಯನ್ನ ಖರೀದಿ ಹಿಡಿದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟಂಬದ ಸಾಲವನ್ನ ಮರು ಪಾವತಿ ಮಾಡಲು 1 ನೇ ಪ್ರತಿವಾದಿ ಸದರಿ ಜಮೀನನ್ನ ಮಾರಿದ್ದಾರೆ ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ದಾವಾ ಜಮೀನನ್ನ ಮಾರಾಟ ಮಾಡಲಾಗಿದೆ ಎನ್ನುವುದು ನನಗೆ ಗೊತ್ತಿದ್ದರು ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 129/5 ನ್ನ ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ದಾವಾ ಜಮೀನನ್ನ ಖರೀದಿಸಿದ ನಂತರ ಹೇರಳ ಹಣ ಖರ್ಚು ಮಾಡಿ ಅದನ್ನ ಅಭಿವೃದ್ಧಿ ಮಾಡಿದ್ದಾನೆ ಎಂದರೆ ಸರಿಯಲ್ಲ. ನಾನು, ನನ್ನ ತಂದೆ ಮತ್ತು 2 ನೇ ಪ್ರತಿವಾದಿ ಸೇರಿಕೊಂಡು ಮಾರಾಟ ಮಾಡಿರುವ ಜಮೀನನ್ನ ಮುಳುಗಿಸುವ ಉದ್ದೇಶದಿಂದ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಯಾದ 1 ನೇ ಪ್ರತಿವಾದಿ ಜೊತೆ ಚೆನ್ನಾಗಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿಯೆ ನನ್ನ ಮುಖಾಂತರ ದಾವೆ ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ. ದಾವಾ ಜಮೀನನ್ನ ಮಾರಾಟ ಮಾಡುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ನನ್ನ ಕಾಕಂದಿರು ಮತ್ತು ಅಜ್ಜಿಯನ್ನ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಕಾಕಂದಿರ ನಡುವೆ ಈಗಾಗಲೇ ವಿಭಾಗವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ರುದ್ರಗೌಡರು ಸುಮಾರು 25 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ರುದ್ರಗೌಡ ನಾನು ಹುಟ್ಟುವುದಕ್ಕಿಂತ ಮೊದಲೆ ಮರಣ ಹೊಂದಿದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿರುವ ಜಮೀನಿನಲ್ಲಿ ನನಗೆ ಯಾವುದೇ ಹಿಸ್ಸೆಯ ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು**

**ಜೇವರ್ಗಿ**